# ಲೇಖಕಿಯರ ಸಂಗಮ

## ಕರ್ನಾಟಕ ಲೇಖಕಿಯರ ಸಂಘ ಮತ್ತು
## ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಸಹಯೋಗದಲ್ಲಿ

ದಿನಾಂಕ: 17 ಮತ್ತು 18 ಆಗಸ್ಟ್, 2026

ಎಚ್. ವಿ. ಸಾವಿತ್ರಮ್ಮ – ಅನುಪಮಾ ನಿರಂಜನ – ಕಮಲಾ ಹಂಪನಾ

## ಸಾಹಿತ್ಯಾವಲೋಕನ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ

### ಉದ್ಘಾಟನಾ ಕಾರ್ಯಕ್ರಮ

ದಿನಾಂಕ: 17– 08– 2026, ಸೋಮವಾರ — ಸಮಯ: 10–30 ರಿಂದ 12–15

ಸ್ಥಳ: ಮಹಾರಾಣಿ ಕ್ಲಸ್ಟರ್ ಕಾಲೇಜು ಸಭಾಂಗಣ

ಪ್ರಸ್ತಾವನೆ: **ಶ್ರೀಮತಿ ಸುಮಾ ಸತೀಶ್** ಕಾರ್ಯದರ್ಶಿ, ಕಲೇಸಂ

ಉದ್ಘಾಟನೆ: **ಡಾ. ವಿಜಯಾ**
ಸಾಹಿತಿ ಹಾಗೂ ಚಿಂತಕರು

ಆಶಯ ಭಾಷಣ: **ಡಾ. ಶೈಲಜಾ ವೇಣುಗೋಪಾಲ್**
ಲೇಖಕರು, ಮೈಸೂರು

ಮುಖ್ಯ ಅತಿಥಿಗಳು: **ಶ್ರೀಮತಿ ಎಚ್.ಎನ್. ಆರತಿ**
ಲೇಖಕರು, ಬೆಂಗಳೂರು
**ಡಾ. ಅಕ್ಕೈ ಪದ್ಮಶಾಲಿ** ಲೇಖಕರು, ಬೆಂಗಳೂರು

ಅಧ್ಯಕ್ಷತೆ: **ಡಾ. ಕೆ. ವೈ. ನಾರಾಯಣಸ್ವಾಮಿ**
ಕುಲಪತಿಗಳು, ಮಹಾರಾಣಿ ಕ್ಲಸ್ಟರ್ ವಿ.ವಿ., ಬೆಂಗಳೂರು

ಗೌರವ ಉಪಸ್ಥಿತಿ: **ಶ್ರೀಮತಿ ಸೀಮಾ ನಾಯಕ್ ಜಿ.** ಕ.ಆ.ಸೇ.
ಕುಲಸಚಿವರು (ಆಡಳಿತ) ಮಹಾರಾಣಿ ಕ್ಲಸ್ಟರ್ ವಿ.ವಿ.
**ಡಾ. ವೈ. ರಮೇಶ್**
ಕುಲಸಚಿವರು (ಮೌಲ್ಯಮಾಪನ) ಮಹಾರಾಣಿ ಕ್ಲಸ್ಟರ್ ವಿ.ವಿ.
**ಶ್ರೀಮತಿ ಸರ್ವಮಂಗಳಾ**
ಉಪಾಧ್ಯಕ್ಷರು, ಕಲೇಸಂ

ಸ್ವಾಗತ: **ಡಾ. ಎಲ್.ಜಿ. ಮೀರಾ**
ಲೇಖಕರು ಹಾಗೂ ಪ್ರಾಧ್ಯಾಪಕರು, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ

ನಿರೂಪಣೆ: **ಡಾ. ಲಲಿತಾ ಕೆ. ಹೊಸಪ್ಯಾಟಿ** ಖಜಾಂಚಿ, ಕಲೇಸಂ

### ಗೋಷ್ಠಿ – 1 — ಸಮಯ: 12–15 ರಿಂದ 2–00



**ಎಚ್. ವಿ. ಸಾವಿತ್ರಮ್ಮ : ಸಾಹಿತ್ಯಾವಲೋಕನ**

ಅಧ್ಯಕ್ಷತೆ: **ಪ್ರೊ. ಎಚ್. ಎಂ. ಕಲಾಶ್ರೀ**
ನಿವೃತ್ತ ಪ್ರಾಧ್ಯಾಪಕರು

ಸಾವಿತ್ರಮ್ಮ ಅವರ ಕತೆಗಳಲ್ಲಿ ಸ್ತ್ರೀನೋಟ : **ಡಾ. ಪಿ. ಚಂದ್ರಿಕಾ**
ಸಾಹಿತಿ ಹಾಗೂ ಸಂಸ್ಕೃತಿ ಚಿಂತಕರು

ಸಾವಿತ್ರಮ್ಮ ಅವರ ಕಾದಂಬರಿಗಳಲ್ಲಿ ಮಹಿಳಾ ದೃಷ್ಟಿ: **ಡಾ. ರವಿ ಎಂ. ಸಿದ್ಲಿಪುರ**
ಸಹಾಯಕ ಪ್ರಾಧ್ಯಾಪಕರು, ಹಾವೇರಿ

ನಿರೂಪಣೆ: **ರೇಣುಕಾ ಕೋಡಗುಂಟಿ**, ಕಾರ್ಯಕಾರಿ ಸಮಿತಿ ಸದಸ್ಯರು, ಕಲೇಸಂ

ಕರ್ನಾಟಕ ಲೇಖಕಿಯರ ಸಂಘ
ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ

## ಆದರದ ಸ್ವಾಗತ

ಮಹಾರಾಣಿ ಕ್ಲಸ್ಟರ್ ವಿ.ವಿ.
ಬೋಧಕ ಮತ್ತು ಬೋಧಕೇತರ ವರ್ಗದವರು

**ಸಹಕಾರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

## ಕವಿಗೋಷ್ಠಿ — ಸಮಯ: 3–00 ರಿಂದ 5–30

ಅಧ್ಯಕ್ಷತೆ: **ಡಾ. ದು. ಸರಸ್ವತಿ** ಸಾಹಿತಿ ಹಾಗೂ ಸ್ತ್ರೀವಾದಿ ಚಿಂತಕರು

**ಆಶಯ ನುಡಿ: ಪ್ರೊ. ಸಬಿಹಾ ಭೂಮಿಗೌಡ** ವಿಶ್ರಾಂತ ಕುಲಪತಿಗಳು, ಕ.ರಾ.ಅ.ಮ.ವಿ.ವಿ.

### ಸ್ವರಚಿತ ಕವನ ವಾಚನ

| | | | | |
|---|---|---|---|---|
| ನೂತನ್ ದೋ ಶೆಟ್ಟಿ | ಡಾ. ಕಾವ್ಯಶ್ರೀ ಎಚ್. | ಶ್ರೀವಲ್ಲಿ ಶೇಷಾದ್ರಿ | ಸ್ವರ್ಣಗೌರಿ | ಚಾಂದಿನಿ |
| ಸಂಧ್ಯಾರಾಣಿ | ಕಾವ್ಯ ಎಂ. ಎನ್. | ಡಾ. ಹುಲಿಕುಂಟೆ ಮೂರ್ತಿ | ಶಾಂತಾ ಜಯಾನಂದ್ | ಡಾ. ಎಚ್. ಲಕ್ಷ್ಮೀನಾರಾಯಣಸ್ವಾಮಿ |
| ಎಸ್. ರಶ್ಮಿ | ಚಾಂದ್ ಪಾಷ | ಸುಚಿತ್ರಾ ಹೆಗಡೆ | ಡಾ. ರಾಧಿಕಾ ರಂಜಿನಿ | ಎಸ್. ಮಂಜುನಾಥ |
| ಡಾ. ಕೆ.ವಿ. ನೇತ್ರಾವತಿ | ಡಾ. ಷಾಕಿರಾ ಖಾನಂ | ಮೇ. ನಾ. ತರಂಗಿಣಿ | ಹೇಮಾ ವಸ್ತ್ರದ | |

ನಿರೂಪಣೆ: **ಮಧುರಾ ಕರ್ಣಂ ಮತ್ತು ಡಾ. ಟಿ. ಟಿ. ಅನುಸೂಯಾ ಹೊಂಬಾಳೆ**
ಕಾರ್ಯಕಾರಿ ಸಮಿತಿ ಸದಸ್ಯರು, ಕಲೇಸಂ

# 18- 08- 2026 ಮಂಗಳವಾರ

## ಗೋಷ್ಠಿ –2 — ಸಮಯ: 10–30 ರಿಂದ 12–15



### ಅನುಪಮಾ ನಿರಂಜನ: ಸಾಹಿತ್ಯಾವಲೋಕನ

ಅಧ್ಯಕ್ಷತೆ: **ಪ್ರೊ. ಡಿ. ಡೊಮಿನಿಕ್**
ಹಿರಿಯ ಪ್ರಾಧ್ಯಾಪಕರು, ಕ.ಅ.ಕೇ. ಬೆಂಗಳೂರು ವಿ.ವಿ.

**ಅನುಪಮಾ ನಿರಂಜನ ಅವರ ಕಾದಂಬರಿಗಳಲ್ಲಿ ಮಹಿಳಾ ಜಗತ್ತು**
**ಡಾ. ಎಂ. ಉಷಾ** ಸ್ತ್ರೀವಾದಿ ಚಿಂತಕರು

**ಅನುಪಮಾ ನಿರಂಜನ ಅವರ ಕತೆಗಳಲ್ಲಿ ಸ್ತ್ರೀ ಸಂವೇದನೆ**
**ದೇವು ಪತ್ತಾರ** ಲೇಖಕರು ಹಾಗೂ ಹಿರಿಯ ಪತ್ರಕರ್ತರು

ನಿರೂಪಣೆ: **ಕೃಷ್ಣಾಬಾಯಿ ಹಾಗಲವಾಡಿ** ಕಾರ್ಯಕಾರಿ ಸಮಿತಿ ಸದಸ್ಯರು, ಕಲೇಸಂ

## ಗೋಷ್ಠಿ – 3 — ಸಮಯ: 12–15 ರಿಂದ 1–45



### ಕಮಲಾ ಹಂಪನಾ: ಸಾಹಿತ್ಯಾವಲೋಕನ

ಅಧ್ಯಕ್ಷತೆ: **ಪ್ರೊ. ಸೆಲ್ವಕುಮಾರಿ**
ವಿಶ್ರಾಂತ ಪ್ರಾಧ್ಯಾಪಕರು

**ಕಮಲಾ ಹಂಪನಾ ಅವರ ಸಂಶೋಧನೆಗಳಲ್ಲಿ ಮಹಿಳಾ ಆಯಾಮ**
**ಡಾ. ಸುಭಾಷ್ ರಾಜಮಾನೆ**
ಪ್ರಾಧ್ಯಾಪಕರು, ಬೆಂಗಳೂರು

**ಕಮಲಾ ಹಂಪನಾ ಅವರ ಸೃಜನಶೀಲ ಸಾಹಿತ್ಯದಲ್ಲಿ ಸ್ತ್ರೀ**
**ಡಾ. ಎಂ. ಕೆಂಪಮ್ಮ**
ಸಹ ಪ್ರಾಧ್ಯಾಪಕರು, ನಂಜನಗೂಡು

ನಿರೂಪಣೆ: **ಡಾ. ಬಿ. ಟಿ. ಅನುರಾಧ** ಸಹ ಕಾರ್ಯದರ್ಶಿ, ಕಲೇಸಂ

## ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ

ಸಮಯ: 3 – 00 ಗಂಟೆಗೆ

**ಸಮಾರೋಪ ನುಡಿ: ಡಾ. ಎಂ. ಎಸ್. ಆಶಾದೇವಿ**
ಲೇಖಕರು ಹಾಗೂ ಸಂಸ್ಕೃತಿ ಚಿಂತಕರು

ಪ್ರಶಸ್ತಿ ಪ್ರದಾನ:
**ಡಾ. ಕೆ. ವೈ. ನಾರಾಯಣಸ್ವಾಮಿ**
ಕುಲಪತಿಗಳು, ಮಹಾರಾಣಿ ಕ್ಲಸ್ಟರ್ ವಿ.ವಿ., ಬೆಂಗಳೂರು
**ಶ್ರೀ ಅಗ್ರಹಾರ ಕೃಷ್ಣಮೂರ್ತಿ**
ಸಾಹಿತಿ ಹಾಗೂ ಸಂಸ್ಕೃತಿ ಚಿಂತಕರು
**ಶ್ರೀಮತಿ ಹೇಮಲತಾ ಮಹಿಷಿ**
ಖ್ಯಾತ ನ್ಯಾಯವಾದಿಗಳು

ಮುಖ್ಯ ಅತಿಥಿಗಳು: **ನಾಡೋಜ ಡಾ. ಹಂ. ಪ. ನಾಗರಾಜಯ್ಯ**
ಸಾಹಿತಿ ಹಾಗೂ ಸಂಸ್ಕೃತಿ ಚಿಂತಕರು

### ಪ್ರಶಸ್ತಿ ಪುರಸ್ಕೃತರು:

**ಎಚ್. ವಿ. ಸಾವಿತ್ರಮ್ಮ ದತ್ತಿ ಪ್ರಶಸ್ತಿ– 2025 : ಡಾ. ಜಯಲಲಿತಾ**

**ಅನುಪಮಾ ನಿರಂಜನ ದತ್ತಿ ಪ್ರಶಸ್ತಿ 2025 : ಶ್ರೀಮತಿ ವಿ.ಪಿ. ಮಾಲತಿ**
**2026 : ಡಾ. ಎಂ. ಎಸ್. ವೇದಾ**

**ಕಮಲಾ ಹಂಪನಾ ದತ್ತಿ ಪ್ರಶಸ್ತಿ 2025**
**ಡಾ. ಬಿ.ಎಸ್. ಗೊರವರ ಹಾಗೂ**
**ಶ್ರೀಮತಿ ಯಶಸ್ವಿನಿ ಕದ್ರಿ**

**ಪ್ರಶಸ್ತಿ ಪುರಸ್ಕೃತರ ಪರಿಚಯ :**
ಡಾ. ಟಿ. ಟಿ. ಅನುಸೂಯಾ ಹೊಂಬಾಳೆ, ಮಧುರಾ ಕರ್ಣಂ, ರೇಣುಕಾ ಕೋಡಗುಂಟಿ

ಅಧ್ಯಕ್ಷತೆ: **ಡಾ. ಆರ್. ಸುನಂದಮ್ಮ**
ಅಧ್ಯಕ್ಷರು, ಕಲೇಸಂ

ಉಪಸ್ಥಿತಿ: **ಡಾ॥ ಆರ್.ಕೆ. ಸರೋಜ** ಉಪಾಧ್ಯಕ್ಷರು, ಕಲೇಸಂ

ನಿರೂಪಣೆ: ಮಾನಸ ಚಂದ್ರಿಕಾ ಕಾರ್ಯಕಾರಿ ಸಮಿತಿ ಸದಸ್ಯರು, ಕಲೇಸಂ
ವಂದನಾರ್ಪಣೆ: ಡಾ. ಮುಕ್ತಾ ಬಿ. ಕಾಗಲಿ ಕಾರ್ಯಕಾರಿ ಸಮಿತಿ ಸದಸ್ಯರು, ಕಲೇಸಂ

### ವಿಶೇಷ ಆಹ್ವಾನಿತರು

| | | | | |
|---|---|---|---|---|
| ವಿ.ಎನ್. ರಾಮಸ್ವಾಮಿ | ಕೆ. ರಾಜಕುಮಾರ್ | ಅನುಪಮಾ ಪ್ರಸಾದ್ | ಭಾರತಿ ವಸ್ತ್ರದ | ಮಲ್ಲಿಗೆ ಸಿರಿಮನೆ |
| ಇಂದಿರಾ ಕೃಷ್ಣಪ್ಪ | ಸುಜಾತಾ ಎಚ್.ಆರ್. | ಡಾ. ಕೆ. ಷರೀಫಾ | ಉಷಾ ನರಸಿಂಹನ್ | ಡಾ. ಶಬಾನಾ |
| ಡಾ॥ ವಸುಂಧರಾ ಭೂಪತಿ | ಪದ್ಮಿನಿ ನಾಗರಾಜ್ | ಡಾ.ವೀ. ಮಂಜುಳಾ ಶಿವಾನಂದ | ಟಿ. ತಿಮ್ಮೇಶ್ | ವಿಜಯಲಕ್ಷ್ಮಿ ನುಗ್ಗೇಹಳ್ಳಿ |
| ಡಾ. ಆರ್. ಪೂರ್ಣಿಮಾ | ಡಾ. ಶಾಂತರಾಜು | ವಿಮಲಾ ಕೆ. ಎಸ್. | ಸಿಸಿರಾ | ಡಾ. ಸಂಗೀತಾ |
| ನೇಮಿಚಂದ್ರ | ಭಾರತಿ ಹೆಗಡೆ | ಕೆ. ಎಲ್. ನಟರಾಜ್ | ಟಿ. ಎಸ್. ಅಶೋಕ್ | ಜಯಲಕ್ಷ್ಮಿ ಪಾಟೀಲ್ |

**ಎಚ್.ವಿ. ಸಾವಿತ್ರಮ್ಮ:** ಕನ್ನಡದ ಮಹತ್ವದ ಲೇಖಕಿಯರಲ್ಲೊಬ್ಬರು. ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುವುದೇ ಕಷ್ಟ ಎನ್ನುವ ಕಾಲದಲ್ಲಿ 1931ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಮೂರು ಬಂಗಾರದ ಪದಕಗಳೊಂದಿಗೆ ಬಿ.ಎ ಪದವಿ ಪಡೆದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ಸಾವಿತ್ರಮ್ಮನವರದು. ಅನುವಾದದಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ರವೀಂದ್ರನಾಥ ಟಾಗೋರರ ನೌಕಾಘಾತ, ಮನೆ ಜಗತ್ತು, ಗೋರಾ, ಚಿನ್ನದ ದೋಣಿ ಹೀಗೆ ಇನ್ನೂ ಅನೇಕ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡದ ಮಹತ್ವದ ಅನುವಾದಕಿ ಎನಿಸಿಕೊಂಡಿದ್ದಾರೆ.

**ಡಾ॥ ಅನುಪಮಾ ನಿರಂಜನ:** ವೃತ್ತಿಯಲ್ಲಿ ವೈದ್ಯರಾಗಿದ್ದರೂ ಸೃಜನಶೀಲ ಸಾಹಿತ್ಯ ಹಾಗೂ ವೈದ್ಯಕೀಯ ಬರಹಗಳಿಗೆ ಪ್ರಸಿದ್ಧರಾದವರು. ಕೇಳು ಕಿಶೋರಿ, ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ, ದಾಂಪತ್ಯ ದೀಪಿಕೆ ಮುಂತಾದವು ವೈದ್ಯಕೀಯ ಪುಸ್ತಕಗಳಾಗಿವೆ. ಸಂಕೋಲೆಯೊಳಗಿಂದ, ನಟಿ, ಕೊಳಚೆ ಕೊಂಪೆಯ ದಾನಿಗಳು ಹಾಗೂ 'ಮಾಧವಿ' ಎಂಬ ಜನಪ್ರಿಯ ಸ್ತ್ರೀವಾದಿ ಕಾದಂಬರಿಯೂ ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ದೊರೆತಿವೆ.

**ನಾಡೋಜ ಡಾ. ಕಮಲಾ ಹಂಪನಾ:** 60 ವರ್ಷಕ್ಕೂ ಹೆಚ್ಚು ಕಾಲ ಅಧ್ಯಾಪನದ ಜೊತೆಗೆ ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ 2003ರಲ್ಲಿ ಮೂಡಬಿದರಿಯಲ್ಲಿ ನಡೆದ 71ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ಸರ್ಕಾರದ ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಕೊಡುವ ನಾಡೋಜ ಪ್ರಶಸ್ತಿ ಮುಂತಾದ ಗೌರವಗಳು ಲಭಿಸಿವೆ. 75ಕ್ಕೂ ಹೆಚ್ಚು ಸೃಜನಾತ್ಮಕ ಕೃತಿಗಳು ಪ್ರಕಟವಾಗಿವೆ.

## ಪುರಸ್ಕೃತರು



**ಡಾ. ಜಯಲಲಿತಾ:** ಕಲೇಸಂನ 2025 ನೆಯ ಸಾಲಿನ ಎಚ್. ವಿ. ಸಾವಿತ್ರಮ್ಮ ಪ್ರಶಸ್ತಿ ಪುರಸ್ಕೃತರಾದ ಇವರು ಪ್ರಸ್ತುತ ಆಂಧ್ರಪ್ರದೇಶದಲ್ಲಿರುವ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಮಿಳಿನ ತೊಲ್ಕಾಪ್ಪಿಯಂ, ಯಾಪ್ಪರುಂಗಲಕಾರಿಕೈ ಸೇರಿದಂತೆ ಅನೇಕ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇವರಿಗೆ ಕನ್ನಡ ಮತ್ತು ತಮಿಳಿನ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.



**ಶ್ರೀಮತಿ ವಿ.ಪಿ.ಮಾಲತಿ:** ಕಲೇಸಂನ 2025 ನೆಯ ಸಾಲಿನ ಅನುಪಮಾ ಪ್ರಶಸ್ತಿ ಪುರಸ್ಕೃತರಾದ ಇವರು ಕಳೆದ ಆರು ದಶಕಗಳಿಂದ ಕನ್ನಡ ಸಾಹಿತ್ಯರಂಗದಲ್ಲಿ ಸಣ್ಣಕಥೆ, ಕಾದಂಬರಿ, ಜೀವನಚರಿತ್ರೆ ಹಾಗೂ ವಿಚಾರ ಸಾಹಿತ್ಯ ಕೃತಿಗಳನ್ನು ರಚಿಸುವುದರ ಮೂಲಕ ಕ್ರಿಯಾಶೀಲರಾಗಿದ್ದಾರೆ. ಇವರ ಸಣ್ಣ ಕಥೆಗಳು ಮಲೆಯಾಳಂ ಮತ್ತು ತೆಲುಗು ಭಾಷೆಗೆ ಅನುವಾದಗೊಂಡಿವೆ. ಇವರ ಸುದೀರ್ಘ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.



**ಡಾ. ಎಂ.ಎಸ್.ವೇದಾ:** ಕಲೇಸಂನ 2026 ನೆಯ ಸಾಲಿನ ಅನುಪಮಾ ಪ್ರಶಸ್ತಿ ಪುರಸ್ಕೃತರಾದ ಇವರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ ಮತ್ತು ಪಿಎಚ್.ಡಿ. ಪದವಿ ಪಡೆದಿದ್ದಾರೆ. ಅಧ್ಯಾಪಕರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಸಾಹಿತ್ಯ ರಚನೆಯನ್ನೂ ಮಾಡಿದ್ದಾರೆ. ಕಥೆ, ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ ಇತ್ಯಾದಿಯಾಗಿ 25ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.



**ಡಾ. ಬಿ. ಎಸ್. ಗೊರವರ:** ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಉಪಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದು, ನಂತರ "ಅಕ್ಷರ ಸಂಗಾತ" ಸಾಹಿತ್ಯ ಮಾಸ ಪತ್ರಿಕೆಯನ್ನು ಆರಂಭಿಸಿದ್ದಾರೆ. ಮಲ್ಲಿಗೆ ಹೂವಿನ ಸಖ, ಹಸಿರು ಟಾವೆಲ್, ಗಾಯಗೊಂಡಿವೆ ತುಟಿ ನಿನ್ನವೇ ಪದ ಹಾಡಿ ಇವರ ಪ್ರಮುಖ ಕೃತಿಗಳಾಗಿವೆ. ಇವರ ಸಾಹಿತ್ಯ ಸೇವೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದ.ರಾ.ಬೇಂದ್ರೆ ಗ್ರಂಥ ಬಹುಮಾನ ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ.



**ಯಶಸ್ವಿನಿ ಕದ್ರಿ:** ಪ್ರಸ್ತುತ ನಿಟ್ಟೆ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದಾರೆ. ಯಶಸ್ವಿನಿಯವರ ಕಾಲೇಜು ಜೀವನ ಕುರಿತಾದ ಅನೇಕ ಕಥೆಗಳು ಉದಯವಾಣಿಯ ಕಾಲೇಜು ಕಾಲಂ ಅಂಕಣ ಹಾಗೂ ಇನ್ನಿತರ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 2021ರಲ್ಲಿ ಪ್ರಕಟವಾದ ಇವರ ಮೊದಲ ಪುಸ್ತಕ ಊರು ಹೇಳದ ಕಥೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಗಳು ಸಂದಿವೆ.